ಎಂದು ಬೇಡಿಕೊಳ್ಳುತ್ತಿದ್ದ ಕೇಶವ ಈಗ ಕಾಯಿಲೆ ಬೀಳದಂತೆ ಅತೀವ ಕಾಳಜಿ ವಹಿಸುತ್ತಾನೆ. ಬೆಂಗಳೂರಿನಲ್ಲಿ ಒಂಟಿ ಜೀವಿಗಳು ಸತ್ತರೂ ಅಡ್ಡಿಯಿಲ್ಲ, ಕಾಯಿಲೆ ಮಾತ್ರ ಬೀಳಬಾರದೆಂಬ ಪಾಠವನ್ನು ಅವನಿಗೆ ಅನುಭವ ಕಲಿಸಿದೆ.

ಬಿ.ಎ ಓದಿ ಮನೆಯಲ್ಲಿ ಕುಳಿತಿದ್ದ ಮಗನನ್ನು ಅವರಪ್ಪ ಬೆಂಗಳೂರಿಗೆ ಪೌರೋಹಿತ್ಯ ಮಾಡಲು ಕಳುಹಿಸಿದಾಗ, ಬೆಂಗಳೂರಿನಲ್ಲಿ ದೊರೆಯಬಹುದಾದ ಸ್ವಾತಂತ್ರ್ಯದ ಬಗ್ಗೆ ಖುಷಿ. ಪಂಚೆ ಸುತ್ತಿಕೊಂಡು ಪೂಜೆ ಮಾಡಬೇಕಾದ ಬಗ್ಗೆ ದುಃಖ ಎರಡೂ ಕಾಡಿತ್ತು. ಸಂಪಾದನೆಗೇನೂ ಕೊರತೆ ಇರಲಿಲ್ಲ. ಆದರೆ, ಪುರೋಹಿತನೆಂಬ ಕಾರಣಕ್ಕೆ ಯಾವ ಹುಡುಗಿಯೂ ಮದುವೆಗೆ ಒಪ್ಪುತ್ತಿಲ್ಲ. ಪೌರೋಹಿತ್ಯ ಇಲ್ಲದಾಗ ತನ್ನ ಪರಿಚಯದವರು ಹೆಚ್ಚಿರುವ ಹಳೇ ಬೆಂಗಳೂರಿನ ಪ್ರದೇಶಗಳನ್ನು ಬಿಟ್ಟು, ಹೊಸ ಐಟಿ ಪ್ರದೇಶಗಳ ಮಾಲ್'ಗಳಲ್ಲಿ ಜೀನ್ಸ್ ಧರಿಸಿ, ಗಾಗಲ್ಸ್ ಏರಿಸಿಕೊಂಡು ಸುತ್ತುತ್ತಾ, ಹಾಲಿವುಡ್ ಸಿನಿಮಾ ನೋಡುತ್ತಾ ಕಾಲ ಕಳೆಯುತ್ತಾನೆ ಮೂವತ್ತೈದರ ಬ್ರಹ್ಮಾಚಾರಿ ಕೇಶವ.

★★★

ಮಳೆ ನಿಂತು ಆಗಲೇ ಐದು ನಿಮಿಷವಾಗುತ್ತಾ ಬಂದಿತ್ತು. ಆದರೂ, ಇಬ್ಬರೂ ಏನೋ ಅನೂಹ್ಯವೊಂದು ಘಟಿಸಲಿದೆ ಎಂಬ ನಿರೀಕ್ಷೆಯಲ್ಲಿ ಅಲ್ಲೇ ನಿಂತಿದ್ದರು. ಚಳಿಗಾಲದಲ್ಲಿ ಮಳೆಯಾಗಿದ್ದರೂ ಸಣ್ಣಗೆ ಬೆವರುತ್ತಿದ್ದವರ ಮೈಯ ಶಾಖ, ಬಿರುಸಾದ ಉಸಿರು, ಅವರ ಅಣತಿಗೆ ಕಾಯದೆ ಪರಸ್ಪರ ಸಂದೇಶ ರವಾನಿಸುತ್ತಲೇ ಇದ್ದವು. ಅರೆಗತ್ತಲಲ್ಲಿ ರೂಪುರೇಷೆಗಳಿಲ್ಲದ ಬರೀ ಆಕಾರಗಳಾಗಿದ್ದ ಇಬ್ಬರೂ, ಒಂದು ಸಣ್ಣ ಸೋಂಕಿಗೆ ಕರಗಿ ಬಿಡಬಹುದಾದಷ್ಟು ಕಾದಿದ್ದರು. ಹಿಡಿತ ಕೊಂಚ ಸಡಿಲವಾದರೂ ಸಾಕು, ಸೇರಿಬಿಡುತ್ತೇವೆಂದು ಕಾಯುತ್ತಿರುವ ಎರಡು ಅಯಸ್ಕಾಂತದ ವಿರುದ್ಧ ಬಿಂದುಗಳಂತೆ ಕುದಿಯುತ್ತಿದ್ದರು. ಮುಖವಿಲ್ಲದ, ಮಾತಿಲ್ಲದ ಈ ಆಕರ್ಷಣೆಯಲ್ಲಿ ವಿಚಿತ್ರವಾದೊಂದು ಬಿಡುಗಡೆ ಇದೆ ಎಂಬುದರ ಅರಿವಿನಿಂದಲೇ, ಇಬ್ಬರೂ ಹೊಸ ಅನುಭವದ ಆಸೆಯಲ್ಲಿ, ಮತ್ತೊಬ್ಬರ ಕೈ ಕೊಂಚವಾದರೋ ಚಾಚೀತೇನೋ ಎಂದು ಕಾದೇ ಕಾದರು.

15 ನಿಮಿಷ ಕಾದ ಬಳಿಕ, ಕುಡುಕರೇ ತುಂಬಿರುವ ತನ್ನೂರಿನ ಕೊನೆಯ ಬಸ್ಸನ್ನೂ ತಪ್ಪಿಸಿಕೊಂಡರೆ, ಮತ್ತೆ ಸಿಗುವುದೆಲ್ಲಾ 250ರೂ ಟಿಕೇಟಿನ ವಾಯು–ವಜ್ರ ಎಂಬ ಬಸ್ಸಿನ ನೆನಪಾಗಿ ಲಕ್ಷ್ಮಿ ಥಟ್ಟನೆ ಹೊರಟುಬಿಟ್ಟಳು. ನಾಳೆ ಸುದರ್ಶನ ಹೋಮವೊಂದಕ್ಕೆ ಬೆಳಗ್ಗೆ ನಾಲ್ಕಕ್ಕೇ ಎದ್ದು ಹೋಗಬೇಕು ಎಂಬ ಅರಿವಿನೊಂದಿಗೆ ಕೇಶವ ಬೈಕ್ ಹತ್ತಿದ. ಮಳೆ ನಿಂತಿದ್ದರಿಂದ ಪಕ್ಕದ ಬೀದಿಯಲ್ಲಿ ಪಟಾಕಿಗಳ ಬೆಳಕು ಮತ್ತು ಸದ್ದು ಕ್ಷಣಕ್ಕೊಮ್ಮೆ ಹುಟ್ಟಿ ಸಾಯತೊಡಗಿದವು.

**ಅರ್ಪಣಾ ಎಚ್.ಎಸ್.**

ಬೆಳೆದಿದ್ದು ಧರ್ಮಸ್ಥಳ. ಮಂಗಳೂರು ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ. ಟೀವಿ ಮಾಧ್ಯಮದಲ್ಲಿ (ಈ ಟಿವಿ) ಕೆಲಕಾಲ ಕೆಲಸ. ಈಗ ಫ್ರೀಲಾನ್ಸರ್ ಆಗಿ (ಅನುವಾದ, voice over) ಕೆಲಸ. ಹೈದರಾಬಾದ್ ವಾಸಿ. ಕಥೆ, ಕವನ, ಲೇಖನ ಬರವಣಿಗೆ ಹವ್ಯಾಸ.